# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -2
## S.S.L.C. MODEL QUESTION PAPER-2 : 2024-25

## ವಿಷಯ : ಸಮಾಜ ವಿಜ್ಞಾನ
## Subject : SOCIAL SCIENCE
**(ಕನ್ನಡ ಮಾಧ್ಯಮ / Kannada Medium)**

**ವಿಷಯ ಸಂಕೇತ : 85-K** | **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 80 ] | [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.

2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.

4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಪ್ರತಿಯೊಂದು ಪ್ರಶ್ನೆ ಅಥವಾ ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : $8 \times 1 = 8$**

1. ರೈತವಾರಿ ಪದ್ಧತಿಯನ್ನು ಜಾರಿಗೆ ತಂದವರು

   (A) ಅಲೆಕ್ಸಾಂಡರ್ ರೀಡ್

   (B) ಕಾರ್ನ್‌ವಾಲಿಸ್

   (C) ಜೇಮ್ಸ್ ಥಾಮ್ಸನ್

   (D) ಆರ್.ಎಂ. ಬರ್ಡ್

2. ಹಂಟರ್ ಆಯೋಗವನ್ನು ನೇಮಿಸಿದ ಮುಖ್ಯ ಉದ್ದೇಶ

   (A) ಚೌರಿಚೌರಾ ಘಟನೆಯ ವಿಚಾರಣೆಗಾಗಿ

   (B) ಜಲಿಯನ್ ವಾಲಾಬಾಗ್ ದುರಂತದ ವಿಚಾರಣೆಗಾಗಿ

   (C) ಭಾರತ ಮತ್ತು ಪಾಕಿಸ್ತಾನಗಳ ಗಡಿಗಳನ್ನು ಗುರುತಿಸಲು

   (D) ಭಾರತಕ್ಕೆ ಡೊಮಿನಿಯನ್ ಸ್ಥಾನಮಾನ ಕಲ್ಪಿಸಲು

3. ಪೆಟ್ರೋಲಿಯಂ ಅನ್ನು ದ್ರವರೂಪದ ಚಿನ್ನ ಎನ್ನುವರು ಏಕೆಂದರೆ, ಇದು

(A) ಬಹುಪಯೋಗಿ ಶಕ್ತಿ ಸಂಪನ್ಮೂಲ

(B) ಹೆಚ್ಚು ರಫ್ತು ಮಾಡಲ್ಪಡುತ್ತದೆ

(C) ಹೆಚ್ಚು ಕಲಬೆರಕೆ ಇರುವ ಸಂಪನ್ಮೂಲ

(D) ಯುದ್ಧ ಮತ್ತು ಶಾಂತಿಕಾಲಗಳಲ್ಲಿ ಬಳಕೆಯಾಗುತ್ತದೆ

4. ಸಾರ್ವಜನಿಕ ಆಡಳಿತದ ಪಿತಾಮಹ

(A) ಎಫ್.ಎಂ. ಮಾರ್ಕ್ಸ್

(B) ಲೂತರ್ ಗುಲಿಕ್

(C) ವುಡ್ರೋ ವಿಲ್ಸನ್

(D) ಫಿಫನರ್

5. ಅಸ್ಪೃಶ್ಯತೆ ಆಚರಣೆಯನ್ನು ನಿಷೇಧಿಸಿರುವ ನಮ್ಮ ಸಂವಿಧಾನದ ವಿಧಿ

(A) 14 (B) 17

(C) 24 (D) 29

6. ಪ್ರಸವಪೂರ್ಣ ಲಿಂಗಪತ್ತೆ ಪರೀಕ್ಷೆ ನಿರ್ಬಂಧ ಕಾಯಿದೆ ಜಾರಿಗೆ ಬಂದ ವರ್ಷ

(A) 1992 (B) 1993

(C) 1986 (D) 1994

7. 1965-66 ರ ಅವಧಿಯಲ್ಲಿ ಸಂಭವಿಸಿದ ಭೀಕರ ಬರಗಾಲ ಎದುರಿಸಲು ಭಾರತ ಸರ್ಕಾರ ಕೈಗೊಂಡ ಕ್ರಮ

(A) ಗೋಧಿಯ ಹೆಚ್ಚು ಇಳುವರಿ ನೀಡುವ ಬಿತ್ತನೆ ಬೀಜಗಳ ಬಳಕೆ

(B) ರೈತರಿಗೆ ಸಹಾಯಧನ ಘೋಷಣೆ

(C) ಭತ್ತಕ್ಕೆ ಬೆಂಬಲ ಬೆಲೆ ನಿಗದಿಪಡಿಸಿತು

(D) ನೀತಿ ಆಯೋಗವನ್ನು ರಚಿಸಿತು

8. ಯಶಸ್ಸನು ಮನೆಗೆ ಸ್ವಿಗ್ಗಿಯ ಮೂಲಕ ದೋಸೆ ತರಿಸಿಕೊಳ್ಳುತ್ತಾನೆ. ಈತ ಬಳಸಿದ ವ್ಯಾಪಾರ ವಿಧಾನ

(A) ಸಗಟು ವ್ಯಾಪಾರ

(B) ಆಮದು

(C) ಟೆಲಿಶಾಪಿಂಗ್

(D) ರಫ್ತು

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಬ್ರಿಟಿಷರು ರಾಣಿ ಚೆನ್ನಮ್ಮಳನ್ನು ಬೈಲಹೊಂಗಲದಿಂದ ಕುಸುಗಲ್ಲಿನ ಸೆರೆಮನೆಗೆ ಏಕೆ ಸ್ಥಳಾಂತರಿಸಿದರು ?

10. ಚಾರ್ಟರ್ ಕಾಯ್ದೆಗಳ ಪ್ರಮುಖ ಉದ್ದೇಶವೇನು ?

11. ಕಡಲ ತೀರದುದ್ದಕ್ಕೂ ನಾವು ಮ್ಯಾಂಗ್ರೋವ್ ಅರಣ್ಯಗಳನ್ನು ಏಕೆ ಬೆಳೆಸಬೇಕು ?

12. ರಾಷ್ಟ್ರೀಯ ವಿದ್ಯುತ್‌ಜಾಲದ ಉದ್ದೇಶವೇನು ?

13. ನೇಮಕಾತಿ ಎಂದರೇನು ?

14. ವರದಕ್ಷಿಣೆ ಲಿಂಗತಾರತಮ್ಯಕ್ಕೆ ಕಾರಣವಾಗಿರುತ್ತದೆ. ದೃಢೀಕರಿಸಿ.

15. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ವೆಚ್ಚ ಹೆಚ್ಚಾಗುತ್ತಿದೆ. ಏಕೆ ?

16. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಯಿತು ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 8 × 2 = 16**

17. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು ?

18. ಫ್ಯಾಸಿಸ್ಟ್ ವಾದದ ಲಕ್ಷಣಗಳೇನು ?

19. ಕಾಗದ ಕೈಗಾರಿಕೆಯಲ್ಲಿ ಬಳಸುವ ಕಚ್ಚಾವಸ್ತುಗಳನ್ನು ಪಟ್ಟಿಮಾಡಿ.

20. ನೈರುತ್ಯ ಮಾನ್ಸೂನ್ ಮಾರುತಗಳು ಅಕ್ಟೋಬರ್‌ನಿಂದ ಹಿಂದೆ ಸರಿಯಲು ಪ್ರಾರಂಭಿಸುತ್ತವೆ. ಏಕೆ ?

21. ಮಹಿಳಾ ಸ್ವಸಹಾಯ ಸಂಘಗಳು ಗ್ರಾಮೀಣ ಪ್ರದೇಶಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಹೇಗೆ ?

22. ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ದೇಶಗಳನ್ನು ತಿಳಿಸಿ.

23. ಕೇಂದ್ರ ಲೋಕಸೇವಾ ಆಯೋಗವು ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸಮರ್ಥಿಸಿ.

**ಅಥವಾ**

ಮೊದಲು ತಾನು ಅಣ್ವಸ್ತ್ರ ಪ್ರಯೋಗಿಸುವುದಿಲ್ಲ ಎಂಬ ನೀತಿಗೆ ಭಾರತವು ಬದ್ಧವಾಗಿದೆ, ಸ್ಪಷ್ಟೀಕರಿಸಿ.

24. ಚಿಪ್ಕೋ ಚಳವಳಿಯನ್ನು ಕುರಿತು ಸಂಕ್ಷಿಪ್ತವಾಗಿ ವಿವರಿಸಿ.

**ಅಥವಾ**

ಬಾಲ್ಯವಿವಾಹಕ್ಕೆ ಕಾರಣಗಳನ್ನು ವಿವರಿಸಿ.

**IV. ಈ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 9 × 3 = 27**

25. ಸತ್ಯಶೋಧಕ ಸಮಾಜದ ಸುಧಾರಣೆಗಳನ್ನು ತಿಳಿಸಿ.

26. ಬಕ್ಸಾರ್ ಕದನದ ಪರಿಣಾಮಗಳೇನು ?

27. ಅನಕ್ಷರತೆಯನ್ನು ತೊಡೆದು ಹಾಕಲು ಭಾರತ ಸರ್ಕಾರವು ಶ್ರಮಿಸುತ್ತಿದೆ, ಸಮರ್ಥಿಸಿ.

28. ಅಸಂಘಟಿತ ವಲಯದ ದುಡಿಮೆಗಾರರು ಎದುರಿಸುತ್ತಿರುವ ಸಮಸ್ಯೆಗಳು ಯಾವುವು ?

29. ಭಾರತದ ಪೂರ್ವ ತೀರದಲ್ಲಿ ಕಂಡುಬರುವ ಬಂದರುಗಳನ್ನು ಹೆಸರಿಸಿ.

30. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳನ್ನು ವಿವರಿಸಿ.

**ಅಥವಾ**

ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಾಧನೆಗಳನ್ನು ವಿವರಿಸಿ.

31. ಮಣ್ಣಿನ ಸವೆತವನ್ನು ನಾವು ಹೇಗೆ ತಡೆಗಟ್ಟಬಹುದು ?

**ಅಥವಾ**

ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ವ್ಯವಸಾಯವು ಪ್ರಮುಖ ಪಾತ್ರವಹಿಸುತ್ತದೆ ಹೇಗೆ ?

32. ಭಾರತದಲ್ಲಿ ಕೃಷಿಯನ್ನು ಅಭಿವೃದ್ಧಿಪಡಿಸಲು ಸರ್ಕಾರ ಹೇಗೆ ಶ್ರಮಿಸುತ್ತಿದೆ ?

**ಅಥವಾ**

ಪ್ರತ್ಯಕ್ಷ ತೆರಿಗೆಯು ಪರೋಕ್ಷ ತೆರಿಗೆಗಿಂತ ಹೇಗೆ ಭಿನ್ನವಾಗಿದೆ ?

33. ಬ್ಯಾಂಕ್ ಖಾತೆಯನ್ನು ತೆರೆಯುವುದರಿಂದ ಆಗುವ ಅನುಕೂಲಗಳಾವುವು ?

**ಅಥವಾ**

ಉದ್ಯಮಿಯ ಗುಣಲಕ್ಷಣಗಳಾವುವು ?

**V. ಈ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $4 \times 4 = 16$**

34. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಶ್‌ಚಂದ್ರ ಬೋಸ್‌ರವರ ಪಾತ್ರವು ಒಂದು ಪ್ರಮುಖ ಮೈಲುಗಲ್ಲಾಗಿದೆ. ಸಮರ್ಥಿಸಿ.

35. ಅರಣ್ಯಗಳ ಮಹತ್ವವನ್ನು ವಿವರಿಸಿ.

36. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ರಚನೆ ಮತ್ತು ಕಾರ್ಯಗಳನ್ನು ತಿಳಿಸಿ.

37. ಭಾರತೀಯರ ಮೇಲೆ ಬ್ರಿಟಿಷ್ ಶಿಕ್ಷಣದ ಪರಿಣಾಮಗಳನ್ನು ವಿವರಿಸಿ.

**ಅಥವಾ**

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮಗಳನ್ನು ವಿವರಿಸಿ.

**VI.** 38. **ನಿಮಗೆ ನೀಡಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳಲ್ಲಿನ ಯಾವುದಾದರೂ 5 ನ್ನು ಗುರುತಿಸಿ :**

**1 × 5 = 5**

a) $82^{\circ}\ 30'$ ಪೂರ್ವ ರೇಖಾಂಶ

b) ಇಂದಿರಾ ಪಾಯಿಂಟ್

c) ಭಾಕ್ರಾನಂಗಲ್

d) ಲಾತೂರ್

e) ಕನ್ಯಾಕುಮಾರಿ

f) ನಮ್ಮ ದೇಶದ ವಾಯುವ್ಯ ದಿಕ್ಕಿನಲ್ಲಿರುವ ನೆರೆಯ ರಾಷ್ಟ್ರ

g) ಭಾರತದ ಚಹದ ಬಂದರು

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 38 ರ ಬದಲಿಗೆ)***

ಹಿಮಾಲಯ ಪರ್ವತವು ಭಾರತೀಯರಿಗೆ ಹೇಗೆ ಸಹಕಾರಿಯಾಗಿದೆ ಎಂದು ವಿವರಿಸಿ. **5**